# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 236 | Pages. 2 | Date: 30-08-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 236 - ಪುಟಗಳು : 2 | 30-08-2026 | ಭಾನುವಾರ | Ph: 8762954248 | ದರ : ₹1


# ವಯಸ್ಸಾಗಿದೆ ಅಷ್ಟೇ ಜ್ಞಾಪಕ ಶಕ್ತಿ ಕುಂದಿಲ್ಲ

## ಕಾವೇರಿ ಕುರಿತು ದೇವೇಗೌಡರ ಸ್ಪಷ್ಟ ನುಡಿ | ಎಲ್ಲವನ್ನೂ ಶೀಘ್ರ ವಿವರಿಸುವೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ನನಗೀಗ 93 ವಯಸ್ಸು. ದೇಹಕ್ಕೆ ವಯಸ್ಸಾಗಿದೆ ಹೊರತು ಜ್ಞಾಪಕ ಶಕ್ತಿ ಇನ್ನೂ ಚೆನ್ನಾಗಿದೆ. ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ಏನೇನಾಗಿದೆ ಎಂದು ವಿವರಿಸುತ್ತೇನೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹೇಳಿದರು.

ತಾಲ್ಲೂಕಿನ ಮಾವಿನಕೆರೆ ಬೆಟ್ಟದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಕಾವೇರಿ ವಿಚಾರದಲ್ಲಿ ಹಿಂದೆ ಏನು ಮಾಡಿದ್ದೇನೆ, ಯಾವ ಹೋರಾಟ ನಡೆಸಿದ್ದೇನೆ, ಯಾವ ಸರ್ಕಾರಗಳು ಯಾವ ರೀತಿಯ ಅನ್ಯಾಯ ಮಾಡಿವೆ ಎಂಬುದನ್ನು ಎಲ್ಲವನ್ನೂ ಎಳೆಎಳೆಯಾಗಿ ಜನರ ಮುಂದಿಡುತ್ತೇನೆ ಎಂದರು.

ನಾನು ಈಗ ರಾಜ್ಯಸಭೆ ಸದಸ್ಯನಲ್ಲ. ಆದರೆ, ಕಾವೇರಿ ವಿಚಾರದಲ್ಲಿ ಹೋರಾಟ ಮಾಡುವ ಶಕ್ತಿ ಮತ್ತು ತಲೆಯೊಳಗೆ ಬುದ್ಧಿ ಇದೆ. ಅದನ್ನು ದೇವರು ಕೊಟ್ಟಿದ್ದಾರೆ. ನನಗೆ ವಯಸ್ಸಾಗಿರಬಹುದು, ಆದರೆ ಜ್ಞಾಪಕಶಕ್ತಿ ಇದೆ. ಯಾವ ಕಾಲದಲ್ಲಿ ಏನು ಮಾಡಿದೆ, ಏನು ಹೋರಾಟ ಮಾಡಿದೆ, ಯಾರು ಅನ್ಯಾಯ ಮಾಡಿದರು ಎಂಬುದೆಲ್ಲ ನನಗೆ ನೆನಪಿದೆ ಎಂದು ಹೇಳಿದರು.

ಪತ್ನಿ ಚನ್ನಮ್ಮ ಅವರ ಅಂತ್ಯಸಂಸ್ಕಾರ ನಡೆದ ಮಾವಿನಕೆರೆ ಬೆಟ್ಟದ ತಪ್ಪಲಿನಲ್ಲಿ ಬಡವರು, ವಿದ್ಯಾರ್ಥಿಗಳು ಹಾಗು ವೃದ್ಧರಿಗೆ ಅನುಕೂಲವಾಗುವಂತಹ ಮಹತ್ವದ ಯೋಜನೆಯೊಂದನ್ನು ರೂಪಿಸಲಾಗುತ್ತಿದೆ. ಪತ್ನಿ ದೈವಾಧೀನರಾದ ಸಂದರ್ಭದಲ್ಲಿ ಪಡುವಲಹಿಪ್ಪೆ ತೋಟದಲ್ಲಿ ಅಂತ್ಯಸಂಸ್ಕಾರ ನಡೆಸಲು ತೀರ್ಮಾನಿಸಿದ್ದೆ. ಆದರೆ, ಮಕ್ಕಳು ಹಾಗು ಅಭಿಮಾನಿಗಳು ಬೆಟ್ಟದ ತಪ್ಪಲಿನಲ್ಲಿ ಅಂತ್ಯಕ್ರಿಯೆ ನಡೆಸಬೇಕು ಎಂದು ಒತ್ತಾಯಿಸಿದರು. ಅದರಂತೆ ಅಲ್ಲಿಯೇ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ತಿಳಿಸಿದರು.



> ಈ ಕ್ಷೇತ್ರದೊಂದಿಗೆ ನಂಟು ಹೊಂದಿದ್ದ ಹಲವರು ಈಗ ವಿದೇಶ, ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಆದರೂ ಶ್ರಾವಣ ಮಾಸದಲ್ಲಿ ಪೂಜೆ ಸಲ್ಲಿಸಲು ಇಲ್ಲಿಗೆ ಬರುತ್ತಾರೆ. ಈ ಕ್ಷೇತ್ರಕ್ಕೆ ಮಹತ್ವದ ಹಿನ್ನೆಲೆಯಿದೆ. ನನ್ನ ರಾಜಕೀಯ ಏಳಿಗೆಯಲ್ಲೂ ದೇವರ ಆಶೀರ್ವಾದ ಇದೆ.
>
> **- ಹೆಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ**

ಅದೇ ಸ್ಥಳದಲ್ಲಿ ಇದೀಗ ಮಹತ್ವದ ಯೋಜನೆಯೊಂದನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಸುಮಾರು 50 ರಿಂದ 60 ಎಕರೆ ಭೂಮಿಯನ್ನು ಈಗಾಗಲೇ ಸ್ವಾಧೀನಪಡಿಸಿಕೊಳ್ಳಲಾಗಿದೆ. ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು, ವೃದ್ಧಾಶ್ರಮ, ಬಡವರು ಹಾಗೂ ಸಂಕಷ್ಟದಲ್ಲಿರುವವರಿಗೆ ಊಟದ ವ್ಯವಸ್ಥೆ ಸೇರಿ ಹಲವು ಜನಪರ ಕಾರ್ಯಕ್ರಮಗಳನ್ನು ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ ಎಂದರು.

ಈ ಯೋಜನೆಗೆ ನಾನು ಸಮ್ಮತಿ ನೀಡಿದ್ದೇನೆ ಅಷ್ಟೇ. ಇದರಲ್ಲಿ ನಾನು ಯಾವುದೇ ಪಾಲುದಾರನಲ್ಲ. ದೆಹಲಿಯಿಂದ ಬಂದು ಸರ್ವೆ ಕೂಡ ಮಾಡಿದ್ದಾರೆ. ಯೋಜನೆಯ ಸಂಪೂರ್ಣ ವಿವರಗಳನ್ನು ನೀಡಿದ ಬಳಿಕ ಕಾಮಗಾರಿ ಆರಂಭವಾಗಲಿದೆ. ಇನ್ನೆರಡು ತಿಂಗಳಲ್ಲಿ ಕೆಲಸ ಪ್ರಾರಂಭಿಸುವ ಉದ್ದೇಶವಿದೆ. ಇದು ದೊಡ್ಡ ಯೋಜನೆಯಾಗಲಿದೆ ಎಂದು ಹೇಳಿದರು.

ಬಾಲಕೃಷ್ಣೇಗೌಡ, ರಮೇಶ್, ಕುಮಾರಸ್ವಾಮಿ, ರೇವಣ್ಣ, ನಿಖಿಲ್, ಕುನಾಲ್, ಕೃಷ್ಣಸೇರಿ ಕುಟುಂಬದವರು ಹಾಗೂ ಇತರರು ಈ ಯೋಜನೆ ಕುರಿತು ಈಗಾಗಲೇ ತೀರ್ಮಾನ ಕೈಗೊಂಡಿದ್ದಾರೆ. ಭೂಮಿಗೆ ಹಣ ನೀಡಿ ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯೂ ನಡೆದಿದೆ. ನಾನು ಇದ್ದರೂ, ಇಲ್ಲದಿದ್ದರೂ ಯೋಜನೆ ಮುಂದುವರಿಯಲಿದೆ ಎಂದು ಹೇಳಿದರು.

## ಶ್ರಾವಣ ಶನಿವಾರ ವಿಶೇಷ ಪೂಜೆ

ಶ್ರಾವಣ ಮಾಸದ ಮೂರನೇ ಶನಿವಾರದ ಹಿನ್ನೆಲೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ತಾಲ್ಲೂಕಿನ ಮಾವಿನಕೆರೆಯಲ್ಲಿರುವ ಬೆಟ್ಟದ ರಂಗನಾಥಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಮಾಜಿ ಸಚಿವ ಹೆಚ್.ಡಿ.ರೇವಣ್ಣ, ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ಅವರು ಪೂಜೆಯಲ್ಲಿ ಹಾಜರಿದ್ದರು.

ಈ ವೇಳೆ ಮಾತನಾಡಿದ ಅವರು, ಶ್ರಾವಣ ಮಾಸದಲ್ಲಿ ಯಾವುದಾದರೂ ಒಂದು ಶನಿವಾರ ನಾನು ಮಾವಿನಕೆರೆಯ ಪವಿತ್ರ ಕ್ಷೇತ್ರಕ್ಕೆ ಭೇಟಿ ನೀಡುವುದನ್ನು ಕಳೆದ ಐದು ದಶಕಗಳಿಂದಲೂ ರೂಢಿಸಿಕೊಂಡು ಬಂದಿದ್ದೇನೆ. ಈ ಕ್ಷೇತ್ರದೊಂದಿಗೆ ನಮ್ಮ ಕುಟುಂಬಕ್ಕೆ ಹಲವು ದಶಕಗಳ ನಂಟಿದೆ. ನಾನು ಒಂಬತ್ತು ವರ್ಷದವನಿದ್ದಾಗ ನನ್ನ ತಂದೆ ಪ್ರತಿ ಶ್ರಾವಣ ಶನಿವಾರ ನನ್ನನ್ನು ಅವರ ಹೆಗಲ ಮೇಲೆ ಕೂರಿಸಿಕೊಂಡು ನಮ್ಮ ಹಳ್ಳಿಯಿಂದ ಇಲ್ಲಿಗೆ ಕರೆದುಕೊಂಡು ಬರುತ್ತಿದ್ದರು. ಕೆಲವೊಮ್ಮೆ ಮೂರು, ನಾಲ್ಕು ಅಥವಾ ಐದು ಶನಿವಾರಗಳಿಗೂ ಇಲ್ಲಿಗೆ ಬರುತ್ತಿದ್ದೆವು ಎಂದು ಬಾಲ್ಯದ ನೆನಪುಗಳನ್ನು ಮೆಲಕು ಹಾಕಿದರು.

# ಕದಾಳು ಗ್ರಾಮದಲ್ಲಿ ಬೋನಿಗೆ ಬಿದ್ದ ಚಿರತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಹಲವು ತಿಂಗಳಿಂದ ಜನರ ನಿದ್ದೆಗೆಡಿಸಿದ್ದ ಹೆಣ್ಣು ಚಿರತೆಯನ್ನು ತಾಲ್ಲೂಕಿನ ಕದಾಳು ಗ್ರಾಮದಲ್ಲಿ ಸೆರೆ ಹಿಡಿಯಲಾಗಿದೆ. ಆದರೆ ಮರಿಗಳು ಮತ್ತು ಗಂಡು ಚಿರತೆ ಬಗ್ಗೆ ಸ್ಥಳೀಯರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ.

ಯಗಚಿ ನದಿ ದಂಡೆಯಲ್ಲಿ ಮೂರು ತಿಂಗಳಿಂದ ಮೂರು ಚಿರತೆಗಳು ಕದಾಳು ಗ್ರಾಮದ ಸುತ್ತಲು ಸುಮಾರು 6 ನಾಯಿಗಳನ್ನು ಹೊತ್ತೊಯ್ದು ಸ್ಥಳೀಯರಲ್ಲಿ ಭಯದ ವಾತಾವರಣ ನಿರ್ಮಾಣವಾಗಿತ್ತು. ವಿಷಯ ತಿಳಿದ ಅರಣ್ಯ ಇಲಾಖೆ ಎರಡು ದಿನಗಳ ಹಿಂದೆ ಸ್ಥಳೀಯ ಲೋಕೇಶ್ ಅವರ ಜಮೀನಿನಲ್ಲಿ ಬೋನು ಅಳವಡಿಸಿದ್ದರು. ಶನಿವಾರ ರಾತ್ರಿ ಹೆಣ್ಣು ಚಿರತೆ ಬೋನಿಗೆ ಬಿದ್ದಿದೆ. ಸೆರೆ ಸಿಕ್ಕಿರುವ ಹೆಣ್ಣು ಚಿರತೆ ಮರಿಗಳನ್ನು ಹಾಕಿದೆ ಎನ್ನಲಾಗಿದೆ. ಮರಿಗಳು ಮತ್ತು ಗಂಡು ಚಿರತೆ ಘಾಸಿಯಾಗಿದ್ದು, ಮುಂದಿನ ದಿನಗಳಲ್ಲಿ ಯಾವ ಸಮಯದಲ್ಲಿ ಏನು ಅಪಘಾತ ಸಂಭವಿಸುತ್ತದೊ ಎಂಬ ಭಯದಲ್ಲಿ ಸ್ಥಳೀಯರು ದಿನ ದೂಡುತ್ತಿದ್ದಾರೆ. ಯಗಚಿ ನದಿ ದಡದಲ್ಲಿ ದಟ್ಟವಾದ ಕಾಡು ಇರುವುದರಿಂದ ಚಿರತೆಗಳು ವಾಸ ಮಾಡುತ್ತಿವೆ. ಆಗಾಗ ಆಹಾರ ಅರಸಿ ಸಮೀಪದಲ್ಲಿರುವ ಗ್ರಾಮಗಳಿಗೆ ದಾಳಿ ಮಾಡುತ್ತಿವೆ.



ಸೆರೆ ಸಿಕ್ಕಿರುವ ಚಿರತೆಯನ್ನು ಕಾಡಿಗೆ ಬಿಟ್ಟ ನಂತರ ಪುನ: ಬೋನು ಅಳವಡಿಸಲಾಗುವುದೆಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

# ಸೆ.5ಕ್ಕೆ ಪ್ರಜಾ ಸೇವೆ ಆಂದೋಲನ ಸಭೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರ ಅಧ್ಯಕ್ಷತೆಯಲ್ಲಿ ಸೆ. 5 ರಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ತಾಲ್ಲೂಕು ಮಟ್ಟದ ಪ್ರಜಾ ಸೇವೆ ಆಂದೋಲನಾ ಸಭೆ ಆಯೋಜಿಸಲಾಗಿದೆ.

ಕುಂದು ಕೊರತೆಗಳಿಗೆ ಸಂಬಂಧಿಸಿ ಅರ್ಜಿ ಆ.31ರ ಬೆಳಿಗ್ಗೆ 10.30 ರಿಂದ ಸೆ.5ರ ಬೆಳಿಗ್ಗೆ 10.30 ಗಂಟೆ ವರೆಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಅರ್ಜಿ ಸಲ್ಲಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತಿಳಿಸಿದ್ದಾರೆ. ಸಭೆಯ ದಿನ ಸಾರ್ವಜನಿಕರು ಖುದ್ದು ಹಾಜರಾಗಿಯೂ ಅಹವಾಲು ಸಲ್ಲಿಸಬಹುದು.

ರಾಜ್ಯಾದ್ಯಂತ ಪ್ರತಿ ಜಿಲ್ಲೆಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಪ್ರತಿ ತಿಂಗಳ ಮೊದಲ ಮತ್ತು ಮೂರನೇ ಶನಿವಾರ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮತ್ತು ಹೋಬಳಿ ಮಟ್ಟದಲ್ಲಿ ಸ್ಥಳೀಯ ಶಾಸಕರ ನೇತೃತ್ವದಲ್ಲಿ ಪ್ರತಿ ತಿಂಗಳ ಎರಡನೇ ಮತ್ತು ನಾಲ್ಕನೇ ಶನಿವಾರ ಪ್ರಜಾ ಸೇವೆ ಆಂದೋಲನ ಸಭೆ ನಡೆಯಲಿದೆ ಎಂದು ಅವರು ಹೇಳಿದ್ದಾರೆ.

# ಇಂದು ಲೀಕ್ ಔಟ್ ನಾಟಕ ಸರಣಿ ಪ್ರದರ್ಶನ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕನ್ನಡ ಪೋಸ್ಟ್ ಹಾಗೂ ಭೀಮ ವಿಜಯ ದಿನಪತ್ರಿಕೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಸಂಯುಕ್ತ ಆಶ್ರಯದಲ್ಲಿ ಖ್ಯಾತ ನಟಿ ಹಾಗೂ ರಂಗಭೂಮಿ ಕಲಾವಿದೆ ಅಕ್ಷತಾ ಪಾಂಡವಪುರ ಅವರ ವಿಶಿಷ್ಟ ಹಾಗೂ ಪ್ರಯೋಗಶೀಲ ನಾಟಕ ಸರಣಿ ಲೀಕ್ ಔಟ್‌ನ 124ನೇ ಪ್ರದರ್ಶನ ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಆ. 30ರ ಭಾನುವಾರ ಸಂಜೆ 5.30ಕ್ಕೆ ನಡೆಯಲಿದೆ.

ಅಂತಾರಾಷ್ಟ್ರೀಯ ಬೂಕರ್ ವಿಜೇತ ಸಾಹಿತಿ ಬಾನು ಮುಷ್ತಾಕ್ ಅವರ ಕಥೆಯನ್ನು ಪ್ರದರ್ಶನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ನಾಟಕದಲ್ಲಿ ಅಕ್ಷತಾ ಪಾಂಡವಪುರ ಅವರು ಟಬಾನು ಭಾರತಟ ಎಂಬ ಹೆಸರಿನಲ್ಲಿ ಅಭಿನಯಿಸಲಿದ್ದಾರೆ.

ಈ ವಿಶಿಷ್ಟ ಪ್ರದರ್ಶನದಲ್ಲಿ ಕಥೆಯ ರೂವಾರಿ, ಹಿರಿಯ ಲೇಖಕಿ ಬಾನು ಮುಷ್ತಾಕ್ ಅವರು ಉಪಸ್ಥಿತರಿರಲಿದ್ದಾರೆ. ಇದು ಕಲಾಭಿಮಾನಿಗಳಿಗೆ ಕಥೆಗಾರ್ತಿ ಮತ್ತು ಕಲಾವಿದೆ ಇಬ್ಬರನ್ನೂ ಒಟ್ಟಿಗೆ ನೋಡುವ ಮತ್ತು ಮುಖಾಮುಖಿಯಾಗುವ ಅಪರೂಪದ ಅವಕಾಶವನ್ನು ಕಲ್ಪಿಸಿದೆ.

ಸಾರ್ವಜನಿಕರಿಗೆ ಹಾಗೂ ಕಲಾಭಿಮಾನಿಗಳಿಗೆ ನಾಟಕ ವೀಕ್ಷಿಸಲು ಪ್ರವೇಶ ಸಂಪೂರ್ಣ ಉಚಿತವಾಗಿದೆ. ರಂಗಭೂಮಿ ಪ್ರಿಯರು, ಸಾಹಿತ್ಯಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಈ ವಿಭಿನ್ನ ರಂಗ ಪ್ರಯೋಗವನ್ನು ವೀಕ್ಷಿಸಿ ಯಶಸ್ವಿಗೊಳಿಸುವಂತೆ ಆಯೋಜಕರು ವಿನಂತಿಸಿದ್ದಾರೆ.

# ಪಕ್ಷದ ಪರವಾಗಿ ಜಿಲ್ಲಾಡಳಿತ ಕೆಲಸ: ಜೆಡಿಎಸ್ ಆರೋಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿ ಅಧಿಕಾರಿಗಳಿಂದ ಕೆಲಸ ಆಗುತ್ತಿಲ್ಲ, ಒಂದು ಪಕ್ಷದ ಪರವಾಗಿ ಕೆಲಸ ಮಾಡುತ್ತಿದೆ ಎಂದು ಮಾಜಿ ಸಚಿವರಾದ ಎ.ಮಂಜು ಮತ್ತು ಎಚ್.ಡಿ.ರೇವಣ್ಣ ಆರೋಪಿಸಿದರು.

ನಗರದಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಗರ್ ಹುಕುಂ ಕೆಲಸ ವಿಳಂಬವಾಗುತ್ತಿದೆ ಎಂದು ಸಾರ್ವಜನಿಕರು ದೂರುತ್ತಿದ್ದಾರೆ. ಡಿಸಿ ಅವರು ಅರ್ಜಿ ಸ್ವೀಕರಿಸುತ್ತಿಲ್ಲ, ಹಿಂಬರಹವನ್ನೂ ನೀಡುತ್ತಿಲ್ಲ. ಆಗುವುದಿಲ್ಲ ಎಂದಾದರೂ ಲೆಟರ್ ಕೊಡಬೇಕು. ಜನರ ಕುಂದುಕೊರತೆ ಸ್ವೀಕರಿಸಬೇಕು. ಬಗರ್ ಹುಕುಂ ಪುನಃ ಆರಂಭಿಸಿ ಉಳುಮೆ ಮಾಡುತ್ತಿರುವ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಎ.ಮಂಜು ಹೇಳಿದರು.

ಗ್ರಾಮ ಪಂಚಾಯಿತಿ ಮೀಸಲಾತಿ ಅಧಿಕಾರ ತಹಸೀಲ್ದಾರ್‌ಗೆ ಇರುತ್ತದೆ. ಕಳೆದ ಬಾರಿಯ ಮೀಸಲಾತಿ ಪುನರಾವರ್ತನೆ ಆಗಬಾರದು. ಮೀಸಲಾತಿ ಪ್ರಕಟವಾದ ನಂತರ 15 ದಿನ ಆಕ್ಷೇಪಣೆಗೆ ಅವಕಾಶ ನೀಡಬೇಕು. ಆದರೆ ತಹಸೀಲ್ದಾರ್ ನೀಡಿದ ಪಟ್ಟಿಯನ್ನು ಡಿಸಿ ಕಚೇರಿಯಲ್ಲಿ ಬದಲಾಯಿಸಿ ಸರ್ಕಾರಕ್ಕೆ ಕಳುಹಿಸಲಾಗಿದೆ. ಕೆಲವೆಡೆ ಮೀಸಲಾತಿ ರಿಪೀಟ್ ಆಗಿದೆ. ಇದು ಮತದಾರರ ಹಕ್ಕು ಕಿತ್ತಂತಾಗಿದೆ. ಇದರಿಂದ ನಾವು ಕೋರ್ಟ್‌ಗೆ ಹೋಗುವಂತಾಗಿದೆ.



ಬದಲಾವಣೆ ಮಾಡೇ ಮಾಡುತ್ತೇವೆ ಎಂದು ಚಾಲೆಂಜ್ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಮಾಜಿ ಸಚಿವ ಹೆಚ್.ಡಿ. ರೇವಣ್ಣ ಮಾತನಾಡಿ, ಡಿಸಿ ಅವರು ಸುತ್ತೋಲೆ ಕಳುಹಿಸಿ ತಹಸೀಲ್ದಾರ್‌ಗೆ ಮಾಹಿತಿ ನೀಡಿದ್ದಾರೆ. ತಹಸೀಲ್ದಾರ್ ಕಳುಹಿಸಿದ್ದನ್ನು ಈ ಕಾರಣಕ್ಕೆ ಬದಲಾಯಿಸಿದ್ದೇನೆ ಎಂದು ಜಿಲ್ಲಾಧಿಕಾರಿ ಕಾರಣ ನೀಡಬೇಕಿತ್ತು. ಒಂದು ಪಂಚಾಯಿತಿಯಲ್ಲಿ 10-11 ಕಡೆ ಬದಲಾವಣೆ ಮಾಡಿದ್ದಾರೆ. ಹಾಗಾದರೆ ತಹಸೀಲ್ದಾರ್ ತಪ್ಪು ಮಾಡಿದ್ದಾರೆ ಎಂದರ್ಥ, ಅವರ ವಿರುದ್ಧ ಯಾಕೆ ಕ್ರಮ ಕೈಗೊಂಡಿಲ್ಲ ಎಂದು ಪ್ರಶ್ನಿಸಿದರು.

ಹಾಸನ ಎಸಿ, ಎಸ್‌ಎಲ್‌ಒ, ಸಕಲೇಶಪುರ ಎಸಿ ಸೇರಿ ಅನೇಕ ಅಧಿಕಾರಿಗಳು ಟ್ರಾನ್ಸ್‌ಫರ್‌ಗೆ ಅರ್ಜಿ ಹಾಕಿದ್ದಾರೆ. ಡಿಸಿ ಟಾರ್ಚರ್‌ನಿಂದ ಅಧಿಕಾರಿಗಳು ವಿಷ ಕುಡಿಯುವ ಸ್ಥಿತಿಗೆ ಹೋಗಿದ್ದಾರೆಂದರು.

ಜಿಲ್ಲೆಯಲ್ಲಿ ಬಿತ್ತನೆ ತೀವ್ರ ಕುಂಠಿತವಾಗಿದೆ. 3 ಲಕ್ಷ ಹೆಕ್ಟೇರ್‌ನಲ್ಲಿ ರಾಗಿ ಬೆಳೆಯುತ್ತಿದ್ದೆವು, ಈಗ ಒಂದು ಕಾಳು ಬೆಳೆಯಲು ಆಗಿಲ್ಲ, ಜೋಳ ಸಂಪೂರ್ಣ ನಾಶವಾಗಿದೆ. 2.10 ಲಕ್ಷ ಜನ ಬೆಳೆ ವಿಮೆ ಕಟ್ಟಿದ್ದಾರೆ, ಹಣ ಬಿಡುಗಡೆ ಆಗಿಲ್ಲ. 5 ತಾಲೂಕು ಬರ ಎಂದು ಘೋಷಿಸಿದ್ದೀರಿ, ಆಲೂರು, ಬೇಲೂರು ಯಾಕೆ ಬಿಟ್ಟಿದ್ದೀರಿ? ಅಲ್ಲಿಯೂ ತೀವ್ರ ಬರವಿದೆ. ತಕ್ಷಣ ಆಲೂರು, ಬೇಲೂರು ಮತ್ತು ಪರಿಸ್ಥಿತಿ ನೋಡಿ ಸಕಲೇಶಪುರವನ್ನೂ ಬರಪೀಡಿತ ಎಂದು ಘೋಷಿಸಿ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

40 ವರ್ಷ ಆದರೂ ಖಾತೆ ಆಗದೆ ಜನರು ಪರದಾಡುತ್ತಿದ್ದಾರೆ. ಹಳ್ಳಿಯ ಜನ ತಾಲೂಕು ಕಚೇರಿಯಲ್ಲಿ 5-6 ವರ್ಷದಿಂದ ಕಾಯುತ್ತಿದ್ದಾರೆ. ದೇವೇಗೌಡರಿಗೆ ರಾಜಕೀಯ ಶಕ್ತಿ ನೀಡಿದ ಜಿಲ್ಲೆಯ ಜನರಿಗೆ ಅನ್ಯಾಯವಾಗಲು ಬಿಡುವುದಿಲ್ಲ ಎಂದರು.

ಶಾಸಕ ಸ್ವರೂಪ್ ಪ್ರಕಾಶ್ ಮಾತನಾಡಿ, ಜಿಲ್ಲಾಡಳಿತ ಕಚೇರಿ ರಿಯಲ್ ಎಸ್ಟೇಟ್ ಪರವಾಗಿದೆ, ರೈತರ ಕೆಲಸ ಆಗುತ್ತಿಲ್ಲ, ರಿಯಲ್ ಎಸ್ಟೇಟ್ ಕೆಲಸ ಬೇಗ ಆಗುತ್ತಿದೆ. ಬಗರ್ ಹುಕುಂ ಸಮಿತಿ, ತಹಸೀಲ್ದಾರ್, ಜಿಲ್ಲಾಧಿಕಾರಿ ಕಚೇರಿ ರೈತರ ಪರ ಕೆಲಸ ಮಾಡಬೇಕು ಎಂದರು.

ಗೋಷ್ಠಿಯಲ್ಲಿ ಮಾಜಿ ಸಚಿವ ಎಚ್.ಕೆ.ಕುಮಾರಸ್ವಾಮಿ ಇದ್ದರು.



ಸಕಲೇಶಪುರ: ಪಟ್ಟಣದ ಪ್ರಮುಖ ಸಂಚಾರ ಕೇಂದ್ರವಾಗಿರುವ ತೇಜಸ್ವಿ ವೃತ್ತದಲ್ಲಿ ಹೆಚ್ಚುತ್ತಿರುವ ಸಂಚಾರ ದಟ್ಟಣೆ ಹಾಗೂ ಅಪಘಾತಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಶಾಸಕ ಸಿಮೆಂಟ್ ಮಂಜು ಅವರ ಸೂಚನೆಯಂತೆ ವೃತ್ತದ ಅಗಲೀಕರಣಕ್ಕೆ ಪೂರಕವಾಗಿ ಶನಿವಾರ ತೆರವು ಕಾರ್ಯಾಚರಣೆ ಆರಂಭಿಸಲಾಯಿತು.

ತೇಜಸ್ವಿ ವೃತ್ತದ ಸಂಚಾರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ್ದ ಶಾಸಕ ಸಿಮೆಂಟ್ ಮಂಜು ಅವರು ಜಿಲ್ಲಾಧಿಕಾರಿ ಸೇರಿ ಸಂಬಂಧಪಟ್ಟ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆ ನಡೆಸಿ, ಸ್ಥಳ ಪರಿಶೀಲನೆಯೊಂದಿಗೆ ಇಲಾಖೆಗಳ ನಡುವೆ ಸಮನ್ವಯ ಸಾಧಿಸಿ ಅಗಲೀಕರಣಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರು.

# ಜೈಲಿನಲ್ಲಿ ವಿಚಾರಣಾಧೀನ ಖೈದಿಗಳ ದಾಂಧಲೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರೌಡಿ ಶೀಟರ್ ಮಂಜೇಶ್ ಕೊಲೆ ಪ್ರಕರಣದ ವಿಚಾರಣಾಧೀನ ಖೈದಿಗಳು ಮತ್ತೊಬ್ಬ ಖೈದಿ ಮತ್ತು ಜೈಲು ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಾರೆ.

ಶುಕ್ರವಾರ ಘಟನೆ ನಡೆದಿದ್ದು ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಶುಕ್ರವಾರ ಖೈದಿಗಳಿಗೆ ಊಟ ವಿತರಿಸಲು ಮತ್ತು ನಿತ್ಯ ಕರ್ಮಗಳಿಗಾಗಿ ಕೊಠಡಿ ಬೀಗ ತೆರೆಯಲಾಗಿತ್ತು. ಕುಟುಂಬಸ್ಥರಿಗೆ ದೂರವಾಣಿ ಕರೆ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಸರದಿ ಸಾಲಿನಲ್ಲಿ ನಿಂತಿದ್ದ ವಿಚಾರಣಾಧೀನ ಕೈದಿಗಳಾದ ಮೋಹನಕುಮಾರ ಹಾಗೂ ರಂಗಸ್ವಾಮಿ ನಡುವೆ ಕಲಹ ಸೃಷ್ಟಿಯಾಗಿದೆ. ನಾನು ಮೊದಲು, ತಾನು ಮೊದಲು ಕರೆ ಮಾಡಬೇಕೆಂಬ ಸಣ್ಣ ವಿಚಾರಕ್ಕೆ ಇಬ್ಬರೂ ವಾಗ್ವಾದ ಶುರು ಮಾಡಿದ್ದಾರೆ. ಮಾತಿನ ಚಕಮಕಿಯಿಂದ ಏರ್ಪಟ್ಟ ಗಲಾಟೆ ವಾಗ್ವಾದಕ್ಕೆ ತಿರುಗಿ ಪರಸ್ಪರ ಹೊಡೆದಾಡಿಕೊಂಡಿದ್ದಾರೆ.

ಗಲಾಟೆಯ ವಿಷಯ ತಿಳಿಯುತ್ತಿದ್ದಂತೆ ಕಾರಾಗೃಹ ಮುಖ್ಯ ವೀಕ್ಷಕ ಹೆಚ್ .ಪರಶುರಾಮ್ ಮತ್ತು ವಿರೇಶ್ ಸಂಗಮದ್ ಜಗಳ ಬಿಡಿಸಲು ಹೋದಾಗ ಅಧಿಕಾರಿಗಳ ಸೂಚನೆಗೆ ಬಗ್ಗದೆ ಅತಿರೇಕ ಪ್ರದರ್ಶಿಸಿದ್ದಾರೆ. ಅಷ್ಟಕ್ಕೆ ಸುಮ್ಮನಾಗದೆ ಮೋಹನಕುಮಾರನ ಸಹಚರರಾದ ಶಶಿಧರ್, ರಾಕೇಶ್, ಯಲ್ಲಾಲಿಂಗ, ಆಕಾಶ್, ಉಮೇಶ್, ಸಾಯಿನಾಥ್, ನಿರೂಪ್ ಭರತ್ ಹಾಗೂ ಚೇತನ್ ಅವರು ಏಕಾಏಕಿ ಪಿಸಿಎಸ್ ಕೊಠಡಿಯೊಳಗೆ ನುಗ್ಗಿ ರಂಗಸ್ವಾಮಿ ಮೇಲೆ ಮತ್ತೆ ಹಲ್ಲೆ ಮಾಡಿದ್ದಾರೆ.

ಪರಿಸ್ಥಿತಿ ವಿಕೋಪಕ್ಕೆ ತಿರುಗುತ್ತಿದ್ದಂತೆ ಅಲ್ಲೇ ಕರ್ತವ್ಯದಲ್ಲಿದ್ದ ಮುಖ್ಯ ವೀಕ್ಷಕ ಪಿ.ಶಿವಕುಮಾರ್, ಹೆಚ್.ಪರಶುರಾಮ ಹಾಗೂ ವಿರೇಶ್ ಸಂಗಮದ್ ಜಗಳ ಬಿಡಿಸಲು ಮುಂದಾದಾಗ ವಿರೇಶ್ ಅವರನ್ನು ಕೆಳಕ್ಕೆ ತಳ್ಳಿ ಹಲ್ಲೆ ನಡೆಸಿದ್ದಾರೆ.

ಜೈಲುವಾಸಿ ರಂಗಸ್ವಾಮಿ ಮೇಲೆ ಹಲ್ಲೆ ನಡೆಸಿದ ಆರೋಪಿಗಳೆಲ್ಲಾ ರೌಡಿ ಶೀಟರ್ ಮಂಜೇಶ್ ಹತ್ಯೆ ಪ್ರಕರಣದಲ್ಲಿ ಸಿಲುಕಿ ಜೈಲು ವಾಸದಲ್ಲಿರುವವರು. ಕಳೆದ ಜೂನ್ 7ರ ರಾತ್ರಿ ಜಿಲ್ಲಾ ನ್ಯಾಯಾಲಯ ಮುಂಭಾಗ ಬೆಂಗಳೂರು ಮೂಲದ ಮಂಜೇಶ್‌ನನ್ನು ಹತ್ಯೆಗೈದು ಪರಾರಿಯಾಗಿದ್ದರು.

# ಸಕಲೇಶಪುರ: ಸ್ಕ್ಯಾನಿಂಗ್ ಸಮಸ್ಯೆಗೆ ತಾತ್ಕಾಲಿಕ ಪರಿಹಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಪಟ್ಟಣದ ಸರ್ಕಾರಿ ಕ್ರಾಫರ್ಡ್ ಆಸ್ಪತ್ರೆಯಲ್ಲಿ ಹಲವು ವರ್ಷಗಳಿಂದ ಸ್ಕ್ಯಾನಿಂಗ್ ಸೌಲಭ್ಯ ಸಮರ್ಪಕವಾಗಿ ಲಭ್ಯವಿಲ್ಲದೆ ಪರದಾಡುತ್ತಿದ್ದ ಬಡ ರೋಗಿಗಳು ಹಾಗೂ ಗರ್ಭಿಣಿಯರ ಸಮಸ್ಯೆಗೆ ಶಾಸಕ ಸಿಮೆಂಟ್ ಮಂಜು ತಾತ್ಕಾಲಿಕ ಪರಿಹಾರ ಕಲ್ಪಿಸಿದ್ದಾರೆ.

ಸರ್ಕಾರಿ ಆಸ್ಪತ್ರೆಗೆ ಬರುವ ಅರ್ಹ ರೋಗಿಗಳಿಗೆ ಪಟ್ಟಣದ ಲೀಲಾವತಿ ಆಸ್ಪತ್ರೆಯಲ್ಲಿ ಉಚಿತವಾಗಿ ಸ್ಕ್ಯಾನಿಂಗ್ ಪರೀಕ್ಷೆ ನಡೆಸಲು ವ್ಯವಸ್ಥೆ ಮಾಡಲಾಗಿದೆ.

ಕ್ರಾಫರ್ಡ್ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಯಂತ್ರದ ಸಮಸ್ಯೆಯಿಂದಾಗಿ ಹಲವು ವರ್ಷಗಳಿಂದ ರೋಗಿಗಳು ಅನಿವಾರ್ಯವಾಗಿ ಖಾಸಗಿ ಆಸ್ಪತ್ರೆಗಳನ್ನು ಅವಲಂಬಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಮಲೆನಾಡು ಭಾಗದಲ್ಲಿ ಬಡವರು ಹಾಗೂ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಖಾಸಗಿ ಆಸ್ಪತ್ರೆಗಳಲ್ಲಿ ಸ್ಕ್ಯಾನಿಂಗ್ ಪರೀಕ್ಷೆಗೆ ತಗಲುವ ವೆಚ್ಚ ಭರಿಸುವುದು ಅನೇಕ ಕುಟುಂಬಗಳಿಗೆ ಹೊರೆಯಾಗಿತ್ತು.

ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ್ದ ಶಾಸಕ ಸಿಮೆಂಟ್ ಮಂಜು, ಕ್ರಾಫರ್ಡ್ ಆಸ್ಪತ್ರೆಯಲ್ಲಿ ಸೌಲಭ್ಯ ಕಲ್ಪಿಸುವಂತೆ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದ್ದರು. ವಿಧಾನಸಭೆಯಲ್ಲಿಯೂ ಈ ಕುರಿತು ಧ್ವನಿ ಎತ್ತಿ ಸರ್ಕಾರದ ಗಮನ ಸೆಳೆದಿದ್ದರು. ಆದರೂ ಸ್ಕ್ಯಾನಿಂಗ್ ಯಂತ್ರ ಹಾಗೂ ಅಗತ್ಯ ಸಿಬ್ಬಂದಿ/ಆಪರೇಟರ್ ವ್ಯವಸ್ಥೆ ವಿಳಂಬವಾಗಿತ್ತು. ಮತ್ತೊಂದೆಡೆ ತಾಲೂಕಿನ ವಿವಿಧ ಸಂಘಟನೆಗಳೂ ಸೇವೆ ಆರಂಭಿಸುವಂತೆ ಪ್ರತಿಭಟನೆ ನಡೆಸಿ ಒತ್ತಾಯಿಸಿದ್ದವು. ಸರ್ಕಾರಿ ಮಟ್ಟದಲ್ಲಿ ಶಾಶ್ವತ ವ್ಯವಸ್ಥೆ ಜಾರಿಯಾಗುವವರೆಗೆ ಬಡ ರೋಗಿಗಳು ತೊಂದರೆ ಅನುಭವಿಸಬಾರದು ಎಂಬ ಉದ್ದೇಶದಿಂದ ಶಾಸಕ ಸಿಮೆಂಟ್ ಮಂಜು ಪರ್ಯಾಯ ವ್ಯವಸ್ಥೆಗೆ ಮುಂದಾಗಿದ್ದಾರೆ.



ಪಟ್ಟಣದ ಲೀಲಾವತಿ ಆಸ್ಪತ್ರೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು, ಕ್ರಾಫರ್ಡ್ ಆಸ್ಪತ್ರೆಗೆ ಬರುವ ಸ್ಕ್ಯಾನಿಂಗ್ ಅಗತ್ಯವಿರುವ ರೋಗಿಗಳು ಹಾಗೂ ಗರ್ಭಿಣಿಯರಿಗೆ ಲೀಲಾವತಿ ಆಸ್ಪತ್ರೆಯಲ್ಲಿ ಉಚಿತವಾಗಿ ಪರೀಕ್ಷೆ ನಡೆಸಲು ವ್ಯವಸ್ಥೆ ಕಲ್ಪಿಸಿದ್ದಾರೆ.

ಶನಿವಾರ ಲೀಲಾವತಿ ಆಸ್ಪತ್ರೆಯಲ್ಲಿ ಸೇವೆಗೆ ಚಾಲನೆ ನೀಡಿ ಮಾತನಾಡಿದ ಶಾಸಕ ಸಿಮೆಂಟ್ ಮಂಜು, ಬಡವರು ಹಾಗೂ ಕೂಲಿ ಕಾರ್ಮಿಕರು ಹಣದ ಕೊರತೆಯಿಂದ ಪರೀಕ್ಷೆಯಿಂದ ವಂಚಿತರಾಗಬಾರದು. ಸರ್ಕಾರಿ ಆಸ್ಪತ್ರೆಯಲ್ಲೇ ಶಾಶ್ವತ ಸ್ಕ್ಯಾನಿಂಗ್ ವ್ಯವಸ್ಥೆ ಆರಂಭವಾಗುವವರೆಗೆ ತಾತ್ಕಾಲಿಕವಾಗಿ ಈ ಸೌಲಭ್ಯ ಕಲ್ಪಿಸಲಾಗಿದೆ.

ಇನ್ನು ಕೆಲವೇ ದಿನಗಳಲ್ಲಿ ಕ್ರಾಫರ್ಡ್ ಆಸ್ಪತ್ರೆಯಲ್ಲೇ ಪರೀಕ್ಷೆ ನಡೆಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

# ಜಾನಪದ ನಮ್ಮ ತಾಯಿ ಪರಂಪರೆ: ಶಂಭುನಾಥ ಶ್ರೀ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಮ್ಮ ನಾಡಿನ ಶ್ರೇಷ್ಠ ಹಾಗೂ ತಾಯಿ ಪರಂಪರೆಯಾದ ಜಾನಪದವು ನಮ್ಮ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಪ್ರತಿಬಿಂಬಿಸುತ್ತದೆ ಎಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.



ನಗರದ ಆದಿಚುಂಚನಗಿರಿ ಶಾಖಾ ಮಠದಲ್ಲಿ ಶುಕ್ರವಾರ ನಡೆದ ಗುರು ತೋರಿದ ದಾರಿ, ತಿಂಗಳ ಮಾಮನ ತೇರು 144ನೇ ಹುಣ್ಣಿಮೆ ಕಾರ್ಯಕ್ರಮ ಹಾಗೂ ಜಾನಪದ ಗಾಯಕಿ ಸವಿತಕ್ಕ ಅವರ ಜನಪದ ಜಗತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ನಾವು ಯಾರನ್ನೇ ಮರೆತರೂ ಜನ್ಮ ನೀಡಿದ ತಾಯಿ-ತಂದೆಯನ್ನು ಮರೆಯಲು ಸಾಧ್ಯವಿಲ್ಲ. ಇಂದಿನ ನೂಲಿನ ಹುಣ್ಣಿಮೆಗೆ ವಿಶೇಷ ಅರ್ಥವಿದೆ. ಮಹಾಭಾರತದಲ್ಲಿ ಶ್ರೀಕೃಷ್ಣನ ಕೈಗೆ ಗಾಯವಾದಾಗ ದ್ರೌಪದಿ ತನ್ನ ಸೀರೆಯ ತುಂಡನ್ನು ಹರಿದು ಕಟ್ಟಿದಳು. ಸಹೋದರ-ಸಹೋದರಿಯರ ನಡುವಿನ ಪ್ರೀತಿ ಮತ್ತು ರಕ್ಷಣೆಯ ಸಂಕೇತವಾಗಿ ಈ ಪರಂಪರೆ ಬೆಳೆದು ಬಂದಿದೆ. ಇಂತಹ ಶ್ರೇಷ್ಠ ಸಂಸ್ಕೃತಿ ನಮ್ಮದು ಎಂದರು.

ಜಾನಪದವು ನಮ್ಮ ನಿತ್ಯ ಜೀವನದಲ್ಲಿ ಹಾಸುಹೊಕ್ಕಾಗಿದೆ. ಅದು ಮಮತೆಯನ್ನು ಕರುಣಿಸಿ ದುಃಖವನ್ನು ದೂರ ಮಾಡುತ್ತದೆ. ನಮ್ಮೊಳಗಿರುವ ಜ್ಞಾನಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಆದರೆ ಪ್ರಸ್ತುತ ದಿನಗಳಲ್ಲಿ ಎಲ್ಲರ ಮನಸ್ಸು ಒಡೆದು ಹೋಗಿದೆ. ಸಹೋದರಿ ರಕ್ಷೆ ಕಟ್ಟಲು ಬಂದರೆ ಮೊದಲು ನ್ಯಾಯಾಲಯದಲ್ಲಿರುವ ಪ್ರಕರಣವನ್ನು ವಾಪಸ್ ಪಡೆಯುವಂತೆ ಹೇಳುವ, ಅಣ್ಣ ಬಾಗಿನ ಕೊಡಲು ಬಂದರೂ ಅದಕ್ಕೆ ಬೇರೆ ಅರ್ಥ ಕಲ್ಪಿಸುವಂತಹ ಮನಸ್ಥಿತಿ ನಿರ್ಮಾಣವಾಗಿದೆ. ಇಂತಹ ಮನಸ್ಥಿತಿ ದೂರವಾಗಬೇಕಾದರೆ ನಮ್ಮ ಪರಂಪರೆ ಹಾಗೂ ಮೌಲ್ಯಗಳನ್ನು ಅನುಸರಿಸಬೇಕು ಎಂದು ಹೇಳಿದರು.

### ಜಾನಪದ ವಿಶಾಲವಾದ ಜಗತ್ತು

ಜಾನಪದ ಗಾಯಕಿ ಸವಿತಕ್ಕ ಮಾತನಾಡಿ, ಜಾನಪದ ವಿಶಾಲವಾದ ಜಗತ್ತು. ಜನಪದವು ನಮ್ಮನ್ನು ಬಹುದೂರ ಕರೆದೊಯ್ದಿದೆ. ಭಾರತದ ಸಂಸ್ಕೃತಿಯನ್ನು ವಿದೇಶಗಳಲ್ಲಿ ಪರಿಚಯಿಸುವಲ್ಲಿ ಜನಪದವೂ ಪ್ರಮುಖ ಪಾತ್ರ ವಹಿಸಿದೆ ಎಂದರು.

1846ರ ಆಗಸ್ಟ್ 22ರಂದು ಅಮೆರಿಕದ ವಿಲಿಯಂ ಜಾನ್ ಥಾಮಸ್ ಮೊದಲ ಬಾರಿಗೆ ಫೋಕ್‌ಲೋರ್ ಎಂಬ ಪದವನ್ನು ಬಳಸಿದರು. ಫೋಕ್‌ಲೋರ್ ಎಂದರೆ ಜಾನಪದ. ಇದರ ಸ್ಮರಣಾರ್ಥವಾಗಿ ಪ್ರತಿವರ್ಷ ಆ. 22ರಂದು ವಿಶ್ವ ಜಾನಪದ ದಿನವನ್ನು ಆಚರಿಸಲಾಗುತ್ತದೆ ಎಂದು ತಿಳಿಸಿದರು.

ಕರ್ನಾಟಕದ ಎಚ್. ನಾಗೇಗೌಡ, ಹಾ.ಮಾ. ನಾಯಕ, ಖಲೀಂ ಖಾನ್, ರಾಜಶೇಖರ್ ಸೇರಿದಂತೆ ಹಲವು ಜಾನಪದ ವಿದ್ವಾಂಸರು ಜಾನಪದ ಲೋಕಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅವರ ಕೆಲಸಗಳು ಭವಿಷ್ಯದ ಪೀಳಿಗೆಗೆ ಸಹಕಾರಿಯಾಗಿವೆ. ಜಾನಪದ ವಿದ್ವಾಂಸರು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ ಎಂದರು.

ಜಾನಪದದಲ್ಲಿ ಶ್ರಮಜೀವಿಗಳ ಬದುಕಿಗೆ ಸಂಬಂಧಿಸಿದ ಹಲವು ಹಾಡುಗಳು ಹುಟ್ಟಿಕೊಂಡಿವೆ.

ರೈತ ಪದಗಳು, ರಾಗಿ ಬೀಸುವ ಸಂದರ್ಭದ ಹಾಡುಗಳು, ಸುಗ್ಗಿ ಗೀತೆಗಳು, ಧಾರ್ಮಿಕ ಹಾಗೂ ಆರಾಧನಾ ಗೀತೆಗಳು ಜನಮನ್ನಣೆ ಪಡೆದಿವೆ. ಸಾಮಾಜಿಕ ಜಾಲತಾಣಗಳೇ ಇಲ್ಲದ ಕಾಲದಲ್ಲಿ ಹುಟ್ಟಿದ ಈ ಪದಗಳನ್ನು ಇಂದಿಗೂ ನಾವು ಉಳಿಸಿಕೊಂಡು ಬರುತ್ತಿದ್ದೇವೆ ಎಂದು ಹೇಳಿದರು.

### ಶಂಭುನಾಥ ಶ್ರೀ ಕುರಿತು ಮೆಚ್ಚುಗೆ

ಹಾಸನದ ಈ ಕಾರ್ಯಕ್ರಮಕ್ಕೆ ಆಗಮಿಸಿರುವುದು ತವರಿಗೆ ಹೆಣ್ಣುಮಗಳು ಬಂದಾಗ ಆಗುವಂತಹ ಖುಷಿ ನೀಡಿದೆ. ಎಲ್ಲರನ್ನೂ ಸಮಾನವಾಗಿ ಕಾಣುವ ಸ್ವಾಮೀಜಿಯನ್ನು ನಾನು ಎಲ್ಲಿಯೂ ಕಂಡಿಲ್ಲ. ಈ ಹಿಂದೆ ಕಂಡ ಕೆಲವು ಕಹಿ ಅನುಭವಗಳಿಗೆ ಹೋಲಿಸಿದರೆ ಇಲ್ಲಿನ ವ್ಯವಸ್ಥೆ ಕಂಡು ತುಂಬಾ ಸಂತೋಷವಾಗಿದೆ. ದೇಶ-ವಿದೇಶಗಳಲ್ಲಿ ಹಾಡಿದ್ದರೂ ಕನ್ನಡದ ನೆಲದಲ್ಲಿ ಹಾಡಲು ಅವಕಾಶ ಸಿಕ್ಕಿರುವುದು ಹೆಮ್ಮೆಯ ವಿಚಾರ ಎಂದು ಸವಿತಕ್ಕ ಸಂತಸ ವ್ಯಕ್ತಪಡಿಸಿದರು.

ಶ್ರೀ ಕಾಲಭೈರವೇಶ್ವರ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ ನಡೆಯಿತು. ವಿದ್ಯಾರ್ಥಿನಿಯರಾದ ತನಿಷಾ ಹಾಗೂ ಕಾರ್ತಿಕಾ ರಕ್ಷಾ ಬಂಧನದ ಮಹತ್ವ ತಿಳಿಸಿದರು. ಆದಿಚುಂಚನಗಿರಿ ಗೌರಿಕೊಪ್ಪಲು ಶಾಲೆಯ ವಿದ್ಯಾರ್ಥಿಗಳು ಸ್ವಾಗತ ನೃತ್ಯದ ಮೂಲಕ ರಂಜಿಸಿದರು. ಜಾನಪದ ಗಾಯಕಿ ಸವಿತಕ್ಕ ಜಾನಪದ ಗಾಯನದ ಮೂಲಕ ಸಭಿಕರ ಮನಗೆದ್ದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ. ಎಚ್. ಎಲ್. ಮಲ್ಲೇಶಗೌಡ, ಉದ್ಯಮಿ ಸೋಮಶೇಖರ್, ಹುಣ್ಣಿಮೆ ಕಾರ್ಯಕ್ರಮದ ಸಂಚಾಲಕ ಎಚ್.ಬಿ. ಮದನಗೌಡ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್. ಕೆಂಚೇಗೌಡ, ಮಾಜಿ ಅಧ್ಯಕ್ಷ ರವಿ ನಾಕಲಗೂಡು, ಪತ್ರಕರ್ತರಾದ ಪ್ರಸನ್ನಕುಮಾರ್ (ಚಲಂ), ಬಿ.ಆರ್. ಬೊಮ್ಮೇಗೌಡ, ಬಿ.ಬಿ. ಶಿವರಾಜ್, ಶ್ರೀಮಠದ ವ್ಯವಸ್ಥಾಪಕ ಚಂದ್ರಶೇಖರ ಇತರರಿದ್ದರು.

# ವಿರೋಧದ ಮಧ್ಯೆ ನಗರದಲ್ಲಿ ಒತ್ತುವರಿ ತೆರವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಜಿಲ್ಲಾಧಿಕಾರಿ ಕಚೇರಿ ಸಮೀಪದ ರಸ್ತೆಯಲ್ಲಿ ಮಹಾನಗರ ಪಾಲಿಕೆ ಸಿಬ್ಬಂದಿ ಶುಕ್ರವಾರ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿದರು.

ಸುಪ್ರೀಂ ಕೋರ್ಟ್ ನಿರ್ದೇಶನ ಹಿನ್ನೆಲೆಯಲ್ಲಿ ಈ ಹಿಂದೆಯೇ ತೆರವು ಕಾರ್ಯಾಚರಣೆ ನಡೆಸಲಾಗಿತ್ತಾದರೂ ಓಮಿನಿಯಲ್ಲಿ ಬಟ್ಟೆ ಮಾರಾಟ ಮಾಡುತ್ತಿದ್ದ ಅಂಗಡಿ ತೆರೆಯಲಾಗಿತ್ತು. ಅದರಿಂದ ಇತರ ಬೀದಿಬದಿ ವ್ಯಾಪಾರಿಗಳು ಪ್ರಶ್ನಿಸಿದ ಹಿನ್ನೆಲೆಯಲ್ಲಿ ಇಪ್ಪತ್ತು ಅಧಿಕ ಪೌರ ಕಾರ್ಮಿಕರು ಸ್ಥಳಕ್ಕೆ ಆಗಮಿಸಿ ಒಮಿನಿಯನ್ನೇ ತಳ್ಳಿಕೊಂಡು ಹೋದರು. ಈ ವೇಳೆ ಬಟ್ಟೆ ವ್ಯಾಪಾರಿ ಮಹಿಳೆ ಹಾಗು ಪಾಲಿಕೆ ನೌಕರರ ನಡುವೆ ವಾಗ್ವಾದ ನಡೆಯಿತು.

ಒತ್ತುವರಿ ತೆರವು ಕುರಿತು ಸ್ಥಳೀಯರು ಮಾತನಾಡಿ, ನಗರದಲ್ಲಿ ರಸ್ತೆ ಒತ್ತುವರಿಯಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ ಎಂದು ಗೊತ್ತಿದ್ದರೂ ಶಾಸಕ ಹೆಚ್.ಪಿ.ಸ್ವರೂಪ್ ಅವರು ಆಟೋ ನಿಲ್ದಾಣ, ಫುಡ್ ಕೋರ್ಟ್‌ಗೆ ಅವಕಾಶ ಕಲ್ಪಿಸುತ್ತಿದ್ದಾರೆ. ಅವರೇ ಮುಂದೆ ನಿಂತು ಉದ್ಘಾಟನೆ ನೆರವೇರಿಸುತ್ತಿದ್ದಾರೆ. ಎಲ್ಲೆಂದರಲ್ಲಿ ಆಟೋ ನಿಲ್ದಾಣ ಮಾಡುವುದಾದರೆ ಪೆಟ್ಟಿಗೆ ಅಂಗಡಿಯವರು ಎಲ್ಲಿಗೆ ಹೋಗಬೇಕೆಂದು ಪ್ರಶ್ನಿಸಿದರು.

# ಮಹನೀಯರ ತತ್ವಾದರ್ಶ ಸ್ವಸ್ಥ ಸಮಾಜಕ್ಕೆ ಅಡಿಪಾಯ: ಸಿಮೆಂಟ್ ಮಂಜು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಇತಿಹಾಸವನ್ನು ಅರಿಯದವನು ಇತಿಹಾಸ ಸೃಷ್ಟಿಸಲಾರ. ಬ್ರಹ್ಮಶ್ರೀ ನಾರಾಯಣ ಗುರು ಹಾಗೂ ನುಲಿಯ ಚಂದಯ್ಯ ಅವರಂತಹ ಮಹನೀಯರು ಅಸಮಾನತೆ, ಶೋಷಣೆ ವಿರುದ್ಧ ಹೋರಾಡಿ ಮಾನವೀಯ ಮೌಲ್ಯಗಳನ್ನು ಬಿತ್ತಿದ್ದಾರೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಬ್ರಹ್ಮಶ್ರೀ ನಾರಾಯಣ ಗುರು ಹಾಗೂ ನುಲಿಯ ಚಂದಯ್ಯ ಜಯಂತಿ ಉದ್ಘಾಟಿಸಿ ಮಾತನಾಡಿದರು.

ಮಹನೀಯರ ಜಯಂತಿಗಳನ್ನು ಕೇವಲ ಆಚರಣೆಗೆ ಸೀಮಿತಗೊಳಿಸಬಾರದು. ಅವರ ಜೀವನ, ಹೋರಾಟ, ಚಿಂತನೆ ಹಾಗೂ ಸಮಾಜಕ್ಕೆ ನೀಡಿದ ಕೊಡುಗೆಗಳನ್ನು ಯುವ ಪೀಳಿಗೆಗೆ ತಿಳಿಸಬೇಕು. ಹಣ ಮತ್ತು ಆಸ್ತಿ ಶಾಶ್ವತವಲ್ಲ. ಆದರೆ ಸಮಾಜಕ್ಕೆ ನೀಡಿದ ಉತ್ತಮ ಮೌಲ್ಯಗಳು, ವಿಚಾರಧಾರೆ ಹಾಗೂ ಆದರ್ಶ ಶಾಶ್ವತವಾಗಿ ಉಳಿಯುತ್ತ ಎಂದರು.

ಹಿಂದಿನ ಕಾಲದಲ್ಲಿ ಸಮಾಜದಲ್ಲಿ ಅಸಮಾನತೆ ಯಾವ ಮಟ್ಟದಲ್ಲಿತ್ತು ಎಂಬುದನ್ನು ಇಂದಿನ ಪೀಳಿಗೆಗೆ ಊಹಿಸಿಕೊಳ್ಳುವುದು ಕಷ್ಟ. ಅಂತಹ ಕಾಲಘಟ್ಟದಲ್ಲಿ ನಾರಾಯಣ ಗುರು ಅವರು ಸಾಮಾಜಿಕ ಅಸಮಾನತೆಯ ವಿರುದ್ಧ ಹೋರಾಡಿ, ಮನುಷ್ಯರೆಲ್ಲರೂ ಒಂದೇ ಎಂಬ ಮಾನವೀಯ ಸಂದೇಶ ಸಾರಿದರು. ಅವರ ಚಿಂತನೆಗಳು ಸಾಮಾಜಿಕ ಸುಧಾರಣೆಗೆ ದೊಡ್ಡ ಶಕ್ತಿಯಾದವು ಎಂದು ಹೇಳಿದರು.

ಡಾ.ಬಿ.ಆರ್.ಅಂಬೇಡ್ಕರ್, ಬಸವಣ್ಣ ಹಾಗೂ ನಾರಾಯಣ ಗುರು ಅವರಂತಹ ಮಹನೀಯರು ಸಮಾಜದಲ್ಲಿ ಸುಧಾರಣೆಯ ಹಾದಿ ನಿರ್ಮಿಸದಿದ್ದರೆ ಇಂದು ನಾವು ಕಾಣುತ್ತಿರುವ ಸಮಾನತೆಯ ವಾತಾವರಣ ಅಸಾಧ್ಯವಾಗುತ್ತಿತ್ತು. ಅವರು ನಡೆಸಿದ ಹೋರಾಟ ಮತ್ತು ನೀಡಿದ ಕೊಡುಗೆಯಿಂದಲೇ ಸಮಾಜದ ಎಲ್ಲಾ ವರ್ಗದ ಜನರು ಸಮಾನ ಅವಕಾಶಗಳನ್ನು ಪಡೆಯಲು ಸಾಧ್ಯವಾಗಿದೆ. ನಾವೆಲ್ಲರೂ ಈ ಮಹನೀಯರ ಋಣದಲ್ಲಿದ್ದೇವೆಂದರು.

ಮಹಾತ್ಮ ಗಾಂಧೀಜಿ ಸೇರಿ ಅನೇಕ ಮಹನೀಯರು ನಾರಾಯಣ ಗುರು ಅವರ ವಿಚಾರಧಾರೆಗಳಿಂದ ಪ್ರೇರಣೆ ಪಡೆದಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರೂ ನಾರಾಯಣ ಗುರು ಅವರ ಜನ್ಮ ಸ್ಥಳಕ್ಕೆ ಭೇಟಿ ನೀಡಿ ಗೌರವ ಸಲ್ಲಿಸಿದ್ದಾರೆ. ಸಮಾಜಕ್ಕೆ ಅಮೂಲ್ಯ ಕೊಡುಗೆ ನೀಡಿದ ಮಹನೀಯರ ಹೆಸರು ಈ ಭೂಮಿ ಇರುವವರೆಗೂ ಅಜರಾಮರವಾಗಿರುತ್ತದೆ ಎಂದು ಹೇಳಿದರು.

### ಕಾಯಕ ತತ್ವಕ್ಕೆ ನುಲಿಯ ಚಂದಯ್ಯ ಮಾದರಿ:

ಬಸವಣ್ಣ ಅವರು ಸಾರಿದ ಕಾಯಕವೇ ಕೈಲಾಸ ಎಂಬ ತತ್ವವನ್ನು ತಮ್ಮ ಬದುಕಿನ ಮೂಲಕ ಸಾಕಾರಗೊಳಿಸಿದವರಲ್ಲಿ ನುಲಿಯ ಚಂದಯ್ಯ ಪ್ರಮುಖರು. ದುಡಿಮೆಗೆ ಗೌರವ ನೀಡಿ, ಕಷ್ಟಪಟ್ಟು ಸಂಪಾದಿಸಿದುದನ್ನು ದಾಸೋಹದ ಮೂಲಕ ಸಮಾಜದ ಒಳಿತಿಗೆ ಬಳಸಿದ ಅವರ ಜೀವನ ಎಲ್ಲರಿಗೂ ಮಾದರಿಯಾಗಿದೆ ಎಂದರು.

ಬ್ರಹ್ಮಶ್ರೀ ನಾರಾಯಣ ಗುರು ತಾಲ್ಲೂಕು ಸಂಘಟನೆಯ ಅಧ್ಯಕ್ಷ ಭಾಸ್ಕರ್, ನುಲಿಯ ಚಂದಯ್ಯ ಸಂಘಟನೆಯ ತಾಲ್ಲೂಕು ಅಧ್ಯಕ್ಷ ಮೋಹನ್, ಪ್ರಾಂಶುಪಾಲ ರಮೇಶ್ ಮತ್ತಿತರರಿದ್ದರು.

# ಶೋಷಿತ ಸಮುದಾಯಕ್ಕೆ ನೆರವಾದ ನಾರಾಯಣ ಗುರು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಶಿಕ್ಷಣದೊಂದಿಗೆ ಸಾಮಾಜಿಕ ಕ್ರಾಂತಿಯ ಮೂಲಕ ಶೋಷಿತ ಮತ್ತು ಹಿಂದುಳಿದ ಸಮಾಜಕ್ಕೆ ಸಮಾನತೆ ಒದಗಿಸಿಕೊಟ್ಟವರು ಬ್ರಹ್ಮಶ್ರೀ ನಾರಾಯಣ ಗುರು ಎಂದು ಶಾಸಕ ಸಿ.ಎನ್.ಬಾಲಕೃಷ್ಣ ತಿಳಿಸಿದರು.

ಪಟ್ಟಣದ ಮಿನಿ ವಿಧಾನಸೌಧ ಆವರಣದಲ್ಲಿ ಶುಕ್ರವಾರ ತಾಲ್ಲೂಕು ಆಡಳಿತ ಹಾಗೂ ಆರ್ಯ ಈಡಿಗ ಸಮಾಜದಿಂದ ಹಮ್ಮಿಕೊಂಡಿದ್ದ ಬ್ರಹ್ಮಶ್ರೀ ನಾರಾಯಣ ಗುರು ಅವರ 172ನೇ ಜಯಂತೋತ್ಸವ ಹಾಗೂ ತಾಲ್ಲೂಕು ಕುಳುವ ಜನಾಂಗದ ಕ್ಷೇಮಾಭಿವೃದ್ಧಿ ಸಂಘದಿಂದ ಆಯೋಜಿಸಿದ್ದ ಶಿವಶರಣ ಮತ್ತು ಕಾಯಕ ಯೋಗಿ ನುಲಿಯ ಚಂದಯ್ಯನವರ 919ನೇ ಜಯಂತಿಗೆ ಚಾಲನೆ ನೀಡಿ ಮಾತನಾಡಿದರು.

ದೇಶದಲ್ಲಿ ಅಸಮಾನತೆ, ಜಾತೀಯತೆ ವಿಜೃಂಭಿಸುತ್ತಿದ್ದ ಕಾಲದಲ್ಲಿ ಸಮಾನತೆಯ ಸಿದ್ಧಾಂತವನ್ನು ಜಗತ್ತಿಗೆ ಸಾರಿದವರು ನಾರಾಯಣ ಗುರು. ಅವರ ತತ್ವ ಸಿದ್ಧಾಂತವನ್ನು ಜಗತ್ತು ಒಪ್ಪಿಕೊಂಡಿತ್ತು. ಒಂದೇ ಜಾತಿ, ಒಂದೇ ಮತ, ಒಂದೇ ದೇವರು ಎಂಬ ಕಲ್ಪನೆಯೊಂದಿಗೆ ಸಮಾಜದಲ್ಲಿ ನೊಂದವರ ಧ್ವನಿಯಾಗಿ, ಓರ್ವ ಯೋಗಿಯಾಗಿ ಅನೇಕ ಸುಧಾರಣೆ ತಂದಿದ್ದಾರೆ. ಶೋಷಿತರು ಮತ್ತು ಹಿಂದುಳಿದವರ ಶ್ರೇಯೋಭಿವೃದ್ಧಿಗೆ ನಾರಾಯಣ ಗುರುಗಳ ಹೋರಾಟ ಅವಿಸ್ಮರಣೀಯವಾದದ್ದು ಎಂದರು.

ಇತ್ತೀಚಿನ ದಿನಗಳಲ್ಲಿ ಜಾತಿ ಜಾತಿಗಳ ನಡುವೆ ಸಾಮರಸ್ಯ ಕದಡುತ್ತಿರುವ ಹಿನ್ನಲೆಯಲ್ಲಿ ಸಾಮಾಜಿಕ ನ್ಯಾಯದ ಸಮಸಮಾಜ ನಿರ್ಮಾಣಕ್ಕೆ ಮುನ್ನುಡಿ ಬರೆದ ಶ್ರೀ ನಾರಾಯಣ ಗುರುಗಳು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ಸಾಗೋಣ. ಅವರು ಕಂಡ ಕನಸುಗಳನ್ನು ನಾವೆಲ್ಲರೂ ಕಾರ್ಯರೂಪಕ್ಕೆ ತರಲು ಶ್ರಮಿಸೋಣ ಎಂದರು.

ಬಸವಣ್ಣನವರ ಸಮಕಾಲೀನ ಶಿವಶರಣ ಮತ್ತು ಕಾಯಕಯೋಗಿ ನುಲಿಯ ಚಂದಯ್ಯ ಅವರು ಕಾಯಕದ ಮೂಲಕವೇ ಉನ್ನತಿ ಕಂಡವರು. ಹಗ್ಗ ನೇಯುವ ಕಾಯಕದಿಂದ ಬಂದ ಹಣದಿಂದ ದಾಸೋಹ ನಡೆಸಿದ ಶಿವಶರಣರು. ಬಸವ ಕಲ್ಯಾಣಕ್ಕೆ ಆಗಮಿಸಿದ ಇವರು ಕಾಯಕ ತತ್ವವನ್ನು ಜನಮಾನಸದಲ್ಲಿ ಬಿತ್ತುವುದರ ಮೂಲಕ ದುಡಿಯುವ ವರ್ಗಕ್ಕೆ ಅನುವು ಮಾಡಿಕೊಟ್ಟವರು. ಕಾಯಕಕ್ಕೆ ಒತ್ತು ನೀಡುವ ಮೂಲಕ ಕೊರಚ, ಕೊರವ ಸಮುದಾಯದ ಸಾಂಸ್ಕೃತಿಕ ಪ್ರತಿನಿಧಿಯಾಗಿ ಕಾಯಕದ ಮಹತ್ವವನ್ನು ಸಾರಿದ ನುಲಿಯ ಚಂದಯ್ಯನವರು ಕಾಯಕದಲ್ಲಿಯೇ ದೇವರನ್ನು ಕಂಡ ಮಹಾಶರಣರೆಂದರು.

ತಾಲ್ಲೂಕಿನಲ್ಲಿರುವ ವಿವಿಧ ಸಮಾಜಗಳ ಕಾರ್ಯ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ವಿವಿಧ ಇಲಾಖೆಗಳ ಅಧೀನದಲ್ಲಿ ನಿವೇಶವನ್ನು ಹಸ್ತಾಂತರಗೊಳಿಸಲಾಗಿತ್ತಾದರೂ ಕಾನೂನು ತೊಡಕಿನಿಂದ ನಿವೇಶನ ಹಂಚಿಕೆ ರದ್ದಾಗಿದೆ. ಎಲ್ಲಾ ಸಮಾಜಗಳ ಕಾರ್ಯ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ನಿವೇಶನ ನೀಡಲು ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು.

ತಾಲ್ಲೂಕು ಆರ್ಯ ಈಡಿಗ ಸಂಘದ ಅಧ್ಯಕ್ಷ ಹೆಚ್.ಟಿ.ವೆಂಕಟೇಶ್, ಮಾಜಿ ಅಧ್ಯಕ್ಷ ಸಿ.ಜಿ.ಮಂಜಪ್ಪ, ಉಪಾಧ್ಯಕ್ಷ ಸಿ.ಜಿ.ಕುಮಾರ್, ಕಾರ್ಯದರ್ಶಿ ಸಿ.ಎಸ್.ಕಾರ್ತಿಕ್, ನಿರ್ದೇಶಕ ಸಿ.ಜಿ.ಜಗದೀಶ್, ಶ್ರೀ ರೇಣುಕಾ ಯಲ್ಲಮ್ಮ ದೇವಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸಿ.ಎಸ್.ಹರ್ಷ, ಮುಖಂಡರಾದ ಎಸ್.ಪಿ.ಕೃಷ್ಣಪ್ಪ, ಸಿ.ಎನ್.ದೀಪು, ಜಿ.ಆರ್.ಮಧುಸೂದನ್, ಹೆಚ್.ಟಿ.ಸುರೇಶ್, ದತ್ತ ಗುರು, ಕುಳುವ ಜನಾಂಗದ ಕ್ಷೇಮಾಭಿವೃದ್ಧಿ ಸಂಘದ ರವಿಕುಮಾರ್, ಆನಂದ್, ಪ್ರಕಾಶ್, ಶಿರಸ್ತೆದಾರ್ ಪವನ್ ಮತ್ತಿತರರಿದ್ದರು.

# ಇತಿಹಾಸದಲ್ಲಿ ಈ ದಿನ



## ಆಗಸ್ಟ್-30

1945: ದ್ವಿತೀಯ ವಿಶ್ವಯುದ್ಧದ ಸಂದರ್ಭದಲ್ಲಿ ಜಪಾನ್ ಆಕ್ರಮಣದಿಂದ ಹಾಂಗ್ ಕಾಂಗ್ ಮುಕ್ತಗೊಂಡ ನಂತರ, ಬ್ರಿಟಿಷರ ಆಡಳಿತ ಮತ್ತೆ ಆರಂಭವಾಯಿತು.

1963: ಅಮೆರಿಕ ಮತ್ತು ಸೋವಿಯತ್ ಒಕ್ಕೂಟದ ನಾಯಕರ ನಡುವೆ ನೇರ ಸಂಪರ್ಕಕ್ಕಾಗಿ ಪ್ರಸಿದ್ಧ ವಾಷಿಂಗ್ಟನ್‌ಮಾಸ್ಕೋ ಹಾಟ್ ಲೈನ್ ಕಾರ್ಯಾರಂಭ ಮಾಡಿತು.

1967: ಅಮೆರಿಕದ ಸೆನೆಟ್ ಥರ್ಗುಡ್ ಮಾರ್ಷಲ್ ಅವರನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ದೃಢೀಕರಿಸಿತು. ಅವರು ಅಮೆರಿಕದ ಸುಪ್ರೀಂ ಕೋರ್ಟ್‌ನ ಮೊದಲ ಆಫ್ರಿಕನ್-ಅಮೆರಿಕನ್ ನ್ಯಾಯಮೂರ್ತಿಯಾದರು.

1991: ಸೋವಿಯತ್ ಒಕ್ಕೂಟದ ಪತನದ ಸಂದರ್ಭದಲ್ಲಿ ಅಜರ್ಬೈಜಾನ್ ತನ್ನ ಸ್ವಾತಂತ್ರ್ಯವನ್ನು ಘೋಷಿಸಿತು.

1999: ಇಂಡೋನೇಷ್ಯಾದ ಆಡಳಿತದಿಂದ ಸ್ವಾತಂತ್ರ್ಯ ಪಡೆಯುವ ಕುರಿತು ಪೂರ್ವ ತಿಮೋರ್‌ನಲ್ಲಿ ಜನಮತಸಂಗ್ರಹ ನಡೆಯಿತು. ಬಹುಪಾಲು ಜನರು ಸ್ವಾತಂತ್ರ್ಯದ ಪರವಾಗಿ ಮತ ಚಲಾಯಿಸಿದರು.

2003: ಭಾರತದಲ್ಲಿ ರಾಮಜನ್ಮಭೂಮಿ-ಬಾಬರಿ ಮಸೀದಿ ವಿವಾದಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ನ್ಯಾಯಾಂಗ ವಿಚಾರಣೆಗಳು ಮುಂದುವರಿದಿದ್ದ ಕಾಲಘಟ್ಟದಲ್ಲಿ ಆಗಸ್ಟ್ 30ರಂದು ಹಲವು ಪ್ರಮುಖ ರಾಜಕೀಯ ಚರ್ಚೆಗಳು ನಡೆದವು.

### ನಿಧನ

1918: ರಷ್ಯಾದ ಕ್ರಾಂತಿಕಾರಿ ನಾಯಕ ವ್ಲಾದಿಮಿರ್ ಲೆನಿನ್ ಅವರ ಮೇಲೆ ಮಾಸ್ಕೋದಲ್ಲಿ ಹತ್ಯೆ ಯತ್ನ ನಡೆಯಿತು. ಅವರು ಗಂಭೀರವಾಗಿ ಗಾಯಗೊಂಡು ಬದುಕುಳಿದರು.

# ಶಾಲಾ ಮಕ್ಕಳಿಗೆ ಚಿತ್ರ ತಂಡದಿದ ನೋಟ್ ಬುಕ್ ವಿತರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಬಡವ-ಬಲ್ಲಿದ, ಜಾತಿ, ಧರ್ಮ, ಲಿಂಗಗಳ ತಾರತಮ್ಯವಿಲ್ಲದೇ ಸಮಾನತೆಯಡಿಯಲ್ಲಿ ಶಿಕ್ಷಣ ದೊರಕುವ ಕೇಂದ್ರಗಳೆದರೆ ಆಯಾ ಊರಿನ ಅಥವಾ ಗ್ರಾಮಗಳ ಸರ್ಕಾರಿ ಶಾಲೆಗಳು. ಇವು ಪ್ರತಿ ಹಳ್ಳಿಯ ಆತ್ಮಗಳಿದ್ದಂತೆ ಎಂದು ಚಲನಚಿತ್ರ ನಿರ್ದೇಶಕ ಅರುಣಕುಮಾರ್ ಕರಡಿಗಾಲ ಅಭಿಪ್ರಾಯಪಟ್ಟರು.



ತಾಲ್ಲೂಕಿನ ತಾಳೂರು ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಆಪುಟ್ಟಗೂಡಿನ ಪಟ್ಟದರಸಿಟ ಚಲನಚಿತ್ರ ತಂಡದ ವತಿಯಿಂದ ಹಮ್ಮಿಕೊಂಡಿದ್ದ ಶಾಲಾ ಮಕ್ಕಳಿಗೆ ಉಚಿತ ನೋಟ್ ಬುಕ್ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ನಮ್ಮ ಸಿನಿಮಾ ಚಿತ್ರೀಕರಣ ಸಂದರ್ಭದಲ್ಲಿ ಶಿಕ್ಷಕರು, ಶಾಲಾ ಮಕ್ಕಳು ಹಾಗೂ ಗ್ರಾಮಸ್ಥರು ನೀಡಿದ ಸಹಕಾರ ಮರೆಯುವಂತಿಲ್ಲ. ಈ ಶಾಲೆಗೆ ನಮ್ಮ ಚಿತ್ರತಂಡದಿದ ಪ್ರತಿವರ್ಷ ಮಕ್ಕಳ ಕಲಿಕೆಗೆ ಸಹಾಯ ಮಾಡುವ ತೀರ್ಮಾನ ಮಾಡಿದ್ದೇವೆ. ಸರ್ಕಾರಿ ಶಾಲೆಗಳು ಅಭಿವೃದ್ಧಿಯಾದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಸರ್ಕಾರಿ ಶಾಲೆಗಳ ಪಾತ್ರ ಅತ್ಯಮೂಲ್ಯ. ಸರ್ಕಾರಿ ಉಚಿತ ಕೊಡುಗೆಗಳ ಜೊತೆಗೆ ಸಾರ್ವಜನಿಕರು ನೀಡುವ ಉಚಿತ ಸವಲತ್ತುಗಳನ್ನು ಸದ್ಬಳಕೆ ಮಾಡಿಕೊಂಡು ಮಕ್ಕಳು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕಿದೆ ಎಂದರು.

ತಾಲ್ಲೂಕು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಡಿ.ಎಂ. ವರದರಾಜು ಮಾತನಾಡಿ, ಸರ್ಕಾರಿ ಶಾಲೆಗಳ ಉನ್ನತಿಗಾಗಿ ಪುಟ್ಟಗೂಡಿನ ಪಟ್ಟದರಸಿ ಚಿತ್ರತಂಡ ಶ್ರಮಿಸುತ್ತಿರುವುದು ಶ್ಲಾಘನೀಯ. ಸ್ವಾರ್ಥವನ್ನೇ ಹೊದ್ದು ಮಲಗಿರುವ ಬಹುತೇಕ ಮನಸ್ಸುಗಳಿಗೆ ಇಂತಹ ನಿಸ್ವಾರ್ಥ ಸೇವೆಯು ಮಾದರಿಯಾಗುತ್ತದೆ.

ನಾನು, ನನ್ನದು ಎಂದು ಯೋಚಿಸುವ ಬದಲು ನಾವು ನಮ್ಮದು ಎಂದು ಆಲೋಚಿಸಿ ಕಾರ್ಯತತ್ಪರರಾಗುವ ಇಂತಹ ವ್ಯಕ್ತಿಗಳು ಮಹತ್ವವೆನಿಸುತ್ತಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಕೊಟ್ರೇಶ್ ಎಸ್. ಉಪ್ಪಾರ್ ಮಾತನಾಡಿ, ಅರುಣಕುಮಾರ್ ಕೇವಲ ಚಲನಚಿತ್ರ ನಿರ್ದೇಶಕನಲ್ಲ, ಒಬ್ಬ ದಿಟ್ಟ ಪತ್ರಕರ್ತ, ಸಂಘಟಕ, ಪ್ರತಿಭಾನ್ವಿತ ಉತ್ಸಾಹಿ ಯುವಕ. ಕಳೆದ ನಾಲ್ಕೈದು ವರ್ಷಗಳಿಂದ ಸಕಲೇಶಪುರ ಹೆತ್ತೂರು ಭಾಗದ ಸರ್ಕಾರಿ ಶಾಲಾ ಮಕ್ಕಳಿಗೆ ಪ್ರತಿವರ್ಷ ಎಪ್ಪತ್ತರಿಂದ ಎಂಭತ್ತು ಸಾವಿರ ಮೊತ್ತದ ನೋಟ್ ಪುಸ್ತಕಗಳನ್ನು ಉಚಿತವಾಗಿ ಕೊಡುಗೆಯಾಗಿ ನೀಡುತ್ತಿದ್ದಾರೆ. ಕಳೆದ ವರ್ಷದಿಂದ ನಮ್ಮ ಶಾಲೆಗೂ ಕೊಡುಗೆ ನೀಡುತ್ತಿರುವುದು ಹೆಮ್ಮೆಯ ಸಂಗತಿ. ಸರಕಾರಿ ಶಾಲೆಗಳ ಔನತ್ಯದ ಬಗ್ಗ ಇವರಿಗಿರುವ ಕಾಳಜಿ ಆದರ್ಶಪ್ರಾಯ ಸಂಗತಿಯಾಗಿದೆ ಎಂದರು.

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮಾಜಿ ಅಧ್ಯಕ್ಷ ಟಿ.ಇ. ಧರ್ಮ, ಹಿರಿಯ ಶಿಕ್ಷಕಿ ವಿ.ರವಿತ, ಅತಿಥಿ ಶಿಕ್ಷಕಿ ಎ.ಎಸ್. ರೇಖಾ ಇತರರಿದ್ದರು.

# ಇಂದು ಮಾಡಾಳು ಸ್ವರ್ಣ ಗೌರಮ್ಮ ದೇವಿ ಜಾತ್ರೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಮಾಡಾಳು: ಅರಸೀಕೆರೆ ತಾಲ್ಲೂಕು ಮಾಡಾಳು ಗ್ರಾಮದಲ್ಲಿ ಆ. 30ರ ಭಾನುವಾರ ಸ್ವರ್ಣ ಗೌರಮ್ಮ ದೇವಿ ಜಾತ್ರಾ ಮಹೋತ್ಸವ ನೆರವೇರಲಿದ್ದು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಹಾರನಹಳ್ಳಿ ಸುಕ್ಷೇತ್ರ ಕೋಡಿಮಠದ ಉತ್ತರಾಧಿಕಾರಿ ಚೇತನ್ ಮರಿದೇವರ ಸಾನಿಧ್ಯದಲ್ಲಿ ಧಾರ್ಮಿಕ ಕೈಂಕರ್ಯ ನೆರವೇರಲಿವೆ.



ಕಳೆದ 167 ವರ್ಷಗಳಿಂದ ಸಂಪ್ರದಾಯದಂತೆ ಆಚರಿಸಿಕೊಂಡು ಬರುತ್ತಿರುವ ಶ್ರೀ ಸ್ವರ್ಣಗೌರಮ್ಮ ದೇವಿ ಜಾತ್ರಾ ಮಹೋತ್ಸವ ಇದಾಗಿದೆ. ಅಂದು

ಬೆಳಿಗ್ಗೆ 11 ಗಂಟೆಗೆ ಮೂಲ ಸನ್ನಿಧಿಯಲ್ಲಿ ಪೂಜೆ ಸಲ್ಲಿಸಿ ಗ್ರಾಮದ ಹೊರ ಭಾಗದಲ್ಲಿರುವ ಶ್ರೀ ಪಂಚಲಿಂಗೇಶ್ವರ ದೇವಾಲಯದ ಮುಂಭಾಗ ಇರುವ ತೋಟದಲ್ಲಿ ದೇವಿಯ ಮೂರ್ತಿ ತಯಾರಿಸಲು ಮೃತ್ತಿಕೆ (ಮಣ್ಣು) ತರಲಾಗುವುದು.

ಶ್ರೀಗಳ ಪಾದಪೂಜೆಯ ನಂತರ ಎರಡು ಕುಕ್ಕೆಗಳಲ್ಲಿ ಶ್ರದ್ಧಾ ಭಕ್ತಿಯಿಂದ ಮೃತ್ತಿಕೆಯನ್ನು ತಲೆ ಮೇಲೆ ಹೊತ್ತು ಮಂಗಲ ವಾದ್ಯದೊಂದಿಗೆ ಮೆರವಣಿಗೆ ಮೂಲಕ ವಾಪಾಸ್ ಮೂಲ ಸನ್ನಿಧಿಗೆ ತರಲಾಗುವುದು. ಮಹೋತ್ಸವ ಹಿನ್ನೆಲೆಯಲ್ಲಿ ದೇವಾಲಯವನ್ನು ತಳಿರು ತೋರಣಗಳಿಂದ ಸಿಂಗರಿಸಲಾಗಿದೆ. ಪ್ರತಿ ಮನೆಗಳಲ್ಲೂ ಸಂಭ್ರಮ ಮನೆ ಮಾಡಿದೆ.

# ಮಿನುಗು ಸಿನಿಮಾ ಆಡಿಯೊ ಬಿಡುಗಡೆ ಇಂದು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಪರಿಸರ ಸಂರಕ್ಷಣೆ ಹಾಗೂ ಮಕ್ಕಳ ಪ್ರತಿಭೆಯನ್ನು ಕೇಂದ್ರವಾಗಿಟ್ಟುಕೊಂಡು ನಿರ್ಮಿಸಿರುವ ಟಿಮಿನುಗುಟಿ ಚಲನಚಿತ್ರದ ಆಡಿಯೊ ಬಿಡುಗಡೆ ಸಮಾರಂಭ ಆ. 30ರ ಭಾನುವಾರ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಜರುಗಲಿದೆ ಎಂದು ಚಲನಚಿತ್ರ ನಿರ್ದೇಶಕ ರಾಜೇಶ್ ಕೆಂಚನಹಳ್ಳಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಹಾಭುಜ ಮಾರುತಿ ಮೂವಿ ಮೇಕರ್ ಸಂಸ್ಥೆಗೆ ಸಿನಿಮಾಗೆ ಬಂಡವಾಳ ಹೂಡಿದೆ. ಮಿನುಗು ಚಿತ್ರವು ಮಕ್ಕಳ ಪ್ರತಿಭೆ, ಕುಟುಂಬ ಹಾಗೂ ಪರಿಸರ ಸಂರಕ್ಷಣೆಯ ಸಂದೇಶವನ್ನು ಒಳಗೊಂಡಿದ್ದು ಚನ್ನರಾಯಪಟ್ಟಣ, ಬೆಂಗಳೂರಿನಲ್ಲಿ ಚಿತ್ರೀಕರಣ ಮಾಡಲಾಗಿದೆ ಎಂದರು.

ಬಿ. ಶಿವಾನಂದ್ ಅವರ ಕಥೆ ಆಧರಿಸಿ ನಿರ್ಮಿಸಿರುವ 95 ನಿಮಿಷದ ಸಿನಿಮಾದಲ್ಲಿ ಚನ್ನರಾಯಪಟ್ಟಣದ ಬಾಲ ಕಲಾವಿದ ಧಣಿ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾನೆ. ವಿ. ಮನೋಹರ್ ಸಂಗೀತ ನೀಡಿದ್ದಾರೆ ಎಂದು ಮಾಹಿತಿ ನೀಡಿದರು.

ಚಿತ್ರದಲ್ಲಿ ವಿಶಾಲ್ ರಘು, ಸದಾನಂದ ಸ್ವಾಮಿ, ಸುನೀತಾ ಶೆಟ್ಟಿ, ಮೈಕೊ ರವಿ ಸೇರಿ ಅನೇಕ ಕಲಾವಿದರು ನಟಿಸಿದ್ದಾರೆ. ಆಡಿಯೋ ಬಿಡುಗಡೆ ಸಮಾರಂಭದಲ್ಲಿ ವಿ. ಮನೋಹರ್, ಕಲಾವಿದರಾದ ನಾಗೇಶ್‌ಮಯ್ಯ, ಅಕ್ಷತಾ ಪಾಂಡವಪುರ, ಮೈಕೋ ರವಿ, ಸುನೀತಾ ಶೆಟ್ಟಿ, ವಿಶಾಲ್ ರಘು ಸೇರಿದಂತೆ ಅನೇಕರು ಪಾಲ್ಗೊಳ್ಳಲಿದ್ದಾರೆ ಎಂದರು.

ಭೂಮಿ ಕ್ಷೇಮಾಭಿವೃದ್ಧಿ ಸಂಘದ ಗೌರವಾಧ್ಯಕ್ಷ ಜಿ.ಎಸ್.ರಾಜ್ ಕುಮಾರ್ ಮಾತನಾಡಿ, ಖ್ಯಾತ ಗಾಯಕಿ ಎಸ್.ಜಾನಕಿ ಸ್ಮರಣಾರ್ಥ ಚಲನಚಿತ್ರ ಗೀತೆಗಳ ಗಾಯನ ಸ್ಪರ್ಧೆ ಏರ್ಪಡಿಸಲಾಗಿದೆ. ಆಸಕ್ತ ಗಾಯಕರು ಸ್ಪರ್ಧೆಯಲ್ಲಿ ಪಾಲ್ಗೊಳ್ಳಬಹುದು ಎಂದರು.

ಸುರೇಶ್‌ಗೌಡ, ಸೋಮಶೇಖರ್ ಇದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248